**ದಿಃ11.11.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಬಿ.ಎಸ್.ಆರ್. ವಕೀಲರಿಂದಃ**

ನಾನು ತರಕಾರಿ ವ್ಯಾಪಾರವನ್ನು ಕಳೆದ 41 ವರ್ಷ ಗಳಿಂದ ಮಡಿಕೇರಿಯಲ್ಲಿ ಮಾಡುತ್ತಿದ್ದೇನೆ. ಮೊಣ್ಣಪ್ಪ ಗ್ಯಾರೇಜ್ ಪಕ್ಕದಲ್ಲಿ ನನ್ನ ಅಂಗಡಿ ಇದ್ದು ಅಲ್ಲಿ 35 ವರ್ಷಗಳಿಂದ ವ್ಯಾಪಾರ ಮಾಡುತ್ತಿದ್ದೇನೆ. ನಾನು ಇದುವರೆವಿಗೂ ಯಾವುದೇ ಸಾಲವನ್ನು ಮಾಡಿರುವುದಿಲ್ಲ. 1 ನೇ ಪ್ರತಿವಾದಿ ನನಗೆ ಪರಿಚಯ ಇರುವುದಿಲ್ಲ. 1 ನೇ ಪ್ರತಿವಾದಿಯು ನನ್ನ ಅಂಗಡಿಯಲ್ಲಿ ತರಕಾರಿ ವ್ಯಾಪಾರಕ್ಕೆ ಬರುತ್ತಿದ್ದರು ಎಂದರೆ ಸರಿಯಲ್ಲ. ನನ್ನ ವಾಸದ ಬಾಡಿಗೆ ಮನೆಯು ಕನಕದಾಸ ರಸ್ತೆ ಬಾಗಿಲು ಸಂಖ್ಯೆಃ 4/123 ಎಂದರೆ ಸರಿ. ಈ ಮನೆಯಲ್ಲಿ ನಾನು 45 ವರ್ಷ ಗಳಿಂದ ವಾಸವಿದ್ದೇನೆ. ನಾನು ವಾಸವಿರುವ ಮನೆಯಿಂದ ದಾವಾ ಆಸ್ತಿಗೆ ಸುಮಾರು 1 ಕಿ.ಮಿ. ದೂರ ಆಗಬಹುದು. ನಾನು ದಾವಾ ಆಸ್ತಿಯನ್ನು 1984 ರಲ್ಲಿ ಮಹಮದ್ ಗೌಸ್ ಎಂಬುವವರಿಂದ ನಾನು ಖರೀಸಿದ್ದೇನೆ. ನಾನು ಖರೀದಿಸುವಾಗ ಅದು ಖಾಲಿ ಜಾಗ ಆಗಿತ್ತು. ಈಗಲೂ ಸಹ ದಾವಾ ಆಸ್ತಿಯು ಖಾಲಿ ಜಾಗ ಆಗಿದೆ.

ದಾವಾ ಆಸ್ತಿಯು ಈಗಲೂ ಸಹ ನನ್ನ ಸ್ವಾಧೀನದಲ್ಲಿ ಇದೆ. ದಿಃ10.3.1995 ರಂದು ದಾವಾ ಆಸ್ತಿಯನ್ನು ಕ್ರಯದ ಕರಾರು ಪತ್ರದ ಮೂಲಕ 1 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇನೆ ಎಂದರೆ ಸುಳ್ಳು. ದಾವಾ ಆಸ್ತಿಯ ಸಂಪೂರ್ಣ ಪ್ರತಿಫಲದ ಹಣವನ್ನು ನಾನು ಆ ದಿನ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಈಗ ತೋರಿಸಿದ ನಿಪಿ 4 ರಲ್ಲಿ ನನ್ನ ಸಹಿ ಇಲ್ಲ. ನಾನು ದಾವಾ ಆಸ್ತಿಯನ್ನು 1984 ರಲ್ಲಿ ಮಹಮದ್ ಗೌಸ್ ಎಂಬುವವರಿಂದ ಖರೀದಿಸಿದ ಮೂಲ ಕ್ರಯ ಪತ್ರವು ಕಳೆದು ಹೋಗಿದೆ. ಯಾವಾಗ ಕಳೆದು ಹೋಗಿದೆ ಎಂದು ಗೊತ್ತಿಲ್ಲ. ನಾನು ಪೊಲೀಸರಿಗೆ ಈ ಬಗ್ಗೆ ದೂರು ನೀಡಿಲ್ಲ. ಮೂಲ ಕ್ರಯ ಪತ್ರವನ್ನು ನಾನು ಕರಾರು ಪತ್ರ ಬರೆದುಕೊಡುವಾಗ 1 ನೇ ಪ್ರತಿವಾದಿಗೆ ಕೊಟ್ಟಿದ್ದೇನೆ ಎಂದರೆ ಸುಳ್ಳು. ನಾನು ದಾವಾ ಆಸ್ತಿಯಲ್ಲಿ ದಿಃ10.3.1995 ರವರೆವಿಗೆ ಮಾತ್ರ ಸ್ವಾಧೀನಲ್ಲಿದ್ದೆ ಎಂದರೆ ಸರಿಯಲ್ಲ. ಕರಾರು ಪತ್ರ ಬರೆದುಕೊಟ್ಟ ನಂತರ 1 ನೇ ಪ್ರತಿವಾದಿಯು ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸುಳ್ಳು. ಕರಾರು ಪತ್ರ ಬರೆಯುವಾಗ ನಿಪಿ 4 ರ ಅಧಿಕಾರ ಪತ್ರವನ್ನು ಬರೆದುಕೊಟ್ಟಿದ್ದೇನೆ ಎಂದರೆ ಸುಳ್ಳು. ನಾನು ನೋಟರಿ ವಕೀಲರ ಮುಂದೆ ಅಧಿಕಾರ ಪತ್ರಕ್ಕೆ ಸಹಿ ಮಾಡಿದ್ದೇನೆ ಎಂದರೆ ಸುಳ್ಳು.

ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ಕಟ್ಟಡಗಳು ಇದ್ದು, ಅವುಗಳಲ್ಲಿ ಜನರು ವಾಸವಿದ್ದಾರೆ ಎಂದರೆ ಸರಿ. ಮೈಮೂನಿಸಾ ಎಂಬವವರು ಮನೆಯು ದಾವಾ ಆಸ್ತಿಯ ಪಕ್ಕದಲ್ಲಿ ಇದ್ದು ಅವರು ನನ್ನೊಂದಿಗೆ ವಿಶ್ವಾಸದಿಂದ ಇದ್ದಾರೆ. 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡುವ ಪೂರ್ವದಲ್ಲಿ ಸರ್ವೆ ಮಾಡಿಸಿದ್ದಾರೆ ಎಂದರೆ ಸುಳ್ಳು. ನಂತರ 2 ನೇ ಪ್ರತಿವಾದಿಯು 3 ನೇ ಪ್ರತಿವಾದಿಗೆ , 3 ನೇ ಪ್ರತಿವಾದಿಯು 4 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ ವಿಚಾರ ನನಗೆ ತಿಳಿದಿದೆ ಎಂದರೆ ಸರಿಯಲ್ಲ. ದಿಃ3.11.2012 ರಂದು ನಾನು ದಾವಾ ಆಸ್ತಿಯ ಬಳಿ ಹೋದಾಗ 4 ನೇ ಪ್ರತಿವಾದಿಯಿಂದ ಈ ವ್ಯವಹಾರಗಳು ತಿಳಿದು ಬಂದವು. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವ್ಯಾಜ್ಯ ಕಾರಣಕ್ಕಾಗಿ ಈ ದಿನಾಂಕವನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಿಃ10.3.1995 ರಿಂದ ನಾನು ದಾವಾ ಆಸ್ತಿಯ ಸ್ವಾದೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಯೊಂದಿಗೆ ಕರಾರು ಪತ್ರದ ವ್ಯವಹಾರಕ್ಕೆ ಭಾಗೀಯಾಗಿದ್ದು , ಮಾತುಕತೆಯಂತೆ ಪ್ರತಿಫಲದ ಹಣವನ್ನು

ಪಡೆದುಕೊಂಡು ಸ್ವಾಧೀನ ವಹಿಸಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ವಕೀಲರ ಕಛೇರಿ ಹೋಗಿಲ್ಲ ಮತ್ತು ಯಾವುದೇ ದಾಖಲೆಗೆ ಸಹಿ ಮಾಡಿಲ್ಲ ಎಂದು ವಾದ ಪತ್ರದಲ್ಲಿ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಅಕ್ರಮ ಲಾಭ ಪಡೆಯುವ ಸಲುವಾಗಿ ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. 3

<u>ಪಾಟೀ ಸವಾಲುಃ ಶ್ರೀ ಪಿ.ಯು.ಪಿ. ವಕೀಲರಿಂದಃ</u>

ದಾವಾ ಆಸ್ತಿಯಲ್ಲಿ 3 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾಗ ನಾನು ಅವರನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ದಿಃ14.11.2007 ರಂದು 3 ನೇ ಪ್ರತಿವಾದಿಯು 2 ನೇ ಪ್ರತಿವಾದಿಯಿಂದ ದಾವಾ ಆಸ್ತಿಯನ್ನು ಖರೀದಿಸಿ ಸ್ವಾಧೀನ ಪಡೆದಿದ್ದಾರೆ ಎಂದರೆ ಸುಳ್ಳು. ನಾನೇ ಸ್ವಾಧೀನದಲ್ಲಿ ಇದ್ದೇನೆ. 3 ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದ ವಿಚಾರ ನನಗೆ ತಿಳಿದಿದ್ದರೂ ಸಹ ನಾನು ಅವರನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ದಿಃ9.5.2008 ರಂದು ದಾವಾ ಆಸ್ತಿಯನ್ನು 3 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ಮರು ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. 2007 ರಲ್ಲಿ ಈ ಎಲ್ಲಾ ವ್ಯವಹಾರಗಳು ನನಗೆ ತಿಳಿದಿದ್ದವು ಎಂದರೆ ಸರಿಯಲ್ಲ. (ಉಳಿದಂತೆ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿದ್ದಾರೆ.)

ಶ್ರೀ ಎಸ್. ಎಸ್. ಬಿ. ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲಿಗೆ ಸಮಯ ನೀಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಸಹಿ/-
(ವಿಜಯಕುಮಾರ್)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.